ಎಂ.ವಿ.ಸಿಃ 808/2023
ಪಿ.ಡಬ್ಲ್ಯೂ : 02

ದಿನಾಂಕ 28-07-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರವರಿಂದಃ

ನಾನು ಸಹಿ ಮಾಡಿರುವ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿದ್ದೇನೆ. ಅದರಲ್ಲಿರುವ ವಿಷಯಗಳು ಸರಿ ಇವೆ ಮತ್ತು ಇವು ನನ್ನ ಹೇಳಿಕೆಯ ಮೇರೆಗೆ ತಯಾರಿಸಲಾಗಿದೆ. ನಾನು ಕೆಲವು ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನೋಡಿ ಗುರುತಿಸುತ್ತೇನೆ. ಸದರಿ ದಾಖಲಾತಿಗಳನ್ನು ಈ ಕೆಳಕಂಡಂತೆ ನಿಶಾನೆಗೊಳಪಡಿಸಲಾಯಿತು.

| | |
|---|---|
| ನಿಪಿ-13 | ಕೇಸ್ ಶೀಟ್, |

ನಿಪಿ.**12** ರ ಸಹಿಯನ್ನು ಸಾಕ್ಷಿ ಗುರುತಿಸಿದ್ದು**,** ನಿಪಿ**.12(**ಎ**)** ಎಂದು ಗುರುತಿಸಲಾಯಿತು**.**

ಪಾಟೀ ಸವಾಲುಃ **2** ನೇ ಎದುರುದಾರ ಪರ ವಕೀಲರಿಂದಃ

ಅರ್ಜಿದಾರರಿಗೆ ಯಾವುದೇ ಒಳಸಾಧನವನ್ನು ತೆಗೆಯುವುದನ್ನು ಬಿಟ್ಟರೇ ಬೇರೆ ಚಿಕಿತ್ಸೆ ಬಾಕಿ ಇಲ್ಲ . ಅರ್ಜಿದಾರರಿಗೆ ಆದ ಎಲ್ಲಾ ಗಾಯಗಳು ಗುಣಮುಖವಾಗಿದೆ. ಅರ್ಜಿದಾರರು ಕಾರ್ಪೆಂಟರ್ ಎಂದು ತಿಳಿಸಿರುತ್ತಾರೆ . ಅರ್ಜಿದಾರರು ಕಾರ್ಪೆಂಟರ್ ವೃತ್ತಿ ಮಾಡುತಿದ್ದರು ಎಂದು ನಮ್ಮ ಕೇಸ್‌ಶೀಟ್ ನಲ್ಲಿ ನಮೂದಿಸಿಲ್ಲ . ನನ್ನ ಮುಖ್ಯವಿಚಾರಣೆ ಪ್ರಮಾಣ ಪತ್ರದ ಪ್ಯಾರ ನಂ 1 ಮತ್ತು 2 ರಲ್ಲಿ ಹೇಳಿರುವ ಅಂಶಗಳು ಸುಳ್ಳು ಎಂದರೆ ಸರಿಯಲ್ಲ . ಅರ್ಜಿದಾರರಿಗೆ ನಾನು ವಿಶ್ರಾಂತಿ ಪಡೆಯುವಂತೆ ಸೂಚಿಸಿಲ್ಲ ಆದರೇ ಒಂದು ಕಾಲಿನಲ್ಲಿ ಓಡಾಡಿ ಎಂದು ಹೇಳಿರುತ್ತೇನೆ . ಅರ್ಜಿದಾರರು ಹೊರರೋಗಿಯಾಗಿ ಯಾವ ಯಾವ ದಿನಾಂಕಗಳಂದು ನಮ್ಮ ಆಸ್ಪತ್ರೆ ಗೆ ಬಂದಿದ್ದರು ಎಂದು ಈಗ ಹೇಳಲು ನೆನಪಿಲ್ಲ. ಅರ್ಜಿದಾರರು ನಮ್ಮ ಆಸ್ಪತ್ರೆ ಹೊರರೋಗಿಯಾಗಿ ಬಂದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಯಾವ ಯಾವ ಬಗೆಯ ಪರೀಕ್ಷೆಗಳನ್ನು ಮಾಡಿ ಅಂಗನ್ಯೂನತೆ ನ್ನು ನಿಗದಿ

ಪಡೆಸಿದ್ದೇನೆ ಎಂದು ಪ್ಯಾರಾ 3 ರಲ್ಲಿ ಹೇಳಿರುವ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ಅರ್ಜಿದಾರರ ಸಂಪೂರ್ಣ ದೇಹಕ್ಕೆ ಸಂಬಂದಪಟ್ಟಂತೆ ಎಷ್ಟು ಅಂಗನ್ಯೂನತೆ ಆಗಿದೆ ಎಂದು ಹೇಳಲು ಸಾಧ್ಯವಿಲ್ಲ . ಅರ್ಜಿದಾರರಿಗೆ ಅಳವಡಿಸಿರುವ ಒಳಸಾಧನವನ್ನು ತೆಗೆಯಲೇ ಬೇಕಾಗಿಲ್ಲ ತೆಗೆದರೇ ತೆಗೆಯಬಹುದು ಇಲ್ಲವಾದರೇ ಇಲ್ಲ . ಒಳಸಾಧನವನ್ನು ತೆಗೆಯಲು ರೂ 25000 ಬೇಕಾಗುತ್ತದೆ ಎಂದು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಯಾವುದೇ ಅಂಗನ್ಯೂನತೆ ಇಲ್ಲ ಎಂದರೆ ಸರಿಯಲ್ಲ . ಅರ್ಜಿದಾರರಿಗೆ ಸಹಾಯ ಮಾಡಲು ನ್ಯಾಯಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ**.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದರು

ಪ್ರ.ಹಿ.ಸಿ.ನ್ಯಾ. ಉಡುಪಿ.